ವಿಷಯ : ವಿವಿಧ ಪೌರಸಂಸ್ಥೆಗಳಿಗೆ ಅಭಿವೃದ್ಧಿ ಅನುದಾನ.

1474 (2012)-ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1995, 1996 ಮತ್ತು 1997ನೇ ವರ್ಷಗಳಲ್ಲಿ ವಿವಿಧ ಪೌರಸಂಸ್ಥೆಗಳಿಗೆ ಅಭಿವೃದ್ಧಿ ಅನುದಾನವನ್ನು ನೀಡಿದ ಪ್ರಮಾಣವೆಷ್ಟು?

ಶ್ರೀ ಮೀರಾಜುದ್ದೀನ್ ಎನ್. ಪಟೀಲ್ (ಪೌರಾತಳಿತ ಸಚಿವರು)

1995 - 1850 ಲಕ್ಷಗಳು

1996 - 224 ಲಕ್ಷಗಳು

1997 - 250 ಲಕ್ಷಗಳು.

ವಿಷಯ : ಹೊಸ ಕೈಗಾರಿಕೆಗಾರಿಕೆಗಳಿಗೆ ಮಂಜೂರಾತಿ.

1475 (2011)-ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಎ) 1996 ರಿಂದ ಇಲ್ಲಿಯವರೆಗೆ ಒಟ್ಟು ಎಷ್ಟು ಹೊಸ ಕೈಗಾರಿಕೆಗಳಿಗೆ ಸರ್ಕಾರದಿಂದ ಮಂಜೂರಾತಿಯಾಗಿರುತ್ತವೆ?

ಬಿ) ಒಟ್ಟು ಎಷ್ಟು ಹೊಸ ಕೈಗಾರಿಕೆಗಳ : ಅರ್ಜಿಗಳು ವಿಲೇಯಾಗದೆ ಬಾಕಿ ಉಳಿದಿದೆ ಕಾರಣಗಳನ್ನು ಕೊಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿ ಸಚಿವರು)

ಎ) ಉನ್ನತ ಮಟ್ಟದ ಸಮಿತಿಯಲ್ಲಿ, 53 ಮೆಗಾ ಯೋಜನೆಯ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಹಾಗೂ ಏಕ ಗಾವಾಕ್ಷಿ ಸಮಿತಿಯಲ್ಲಿ ಒಟ್ಟು 311 ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ದಿನಾಂಕ 1-1-95 ರಿಂದ 28-2-92ರವರೆವಿಗೆ ಮಂಜೂರಾತಿ ನೀಡಲಾಗಿದೆ.

ಬಿ) ದಿನಾಂಕ : 28-2-97ರವರೆವಿಗೆ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಮಂಜೂರಾತಿಗೆ ಅರ್ಜಿಗಳು ಬಾಕಿ ಇರುವುದಿಲ್ಲ.